# ಕನ್ನಡ ವಿಷಯ ವಿಶ್ವಕೋಶ

# ಇತಿಹಾಸ ಮತ್ತು ಪುರಾತತ್ತ್ವ

ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮೈಸೂರು ವಿಶ್ವವಿದ್ಯಾನಿಲಯ
೨೦೦೯

**ITIHÂSA MATTU PURÂTATTVA - A Volume on HISTORY AND ARCHAEOLOGY being the Fourth Volume in the series of Subject Encyclopaedia in Kannada, published by Kuvempu Institute of Kannada Studies, Manasagangotri, University of Mysore, Mysore. Chief Editor: Dr. Ambalike Hiriyanna.** First Published: 2009; PP XVI+ 1224; 6 Colour and 3 Black and White Plates. Printers: Manipal Press Ltd., Manipal. Price: Rupees Five Hundred.

© University of Mysore

ಬೆಲೆ: ಐದುನೂರು ರೂಪಾಯಿಗಳು

**ಡಿಟಿಪಿ** : ಸೈಲೋಟಮ್ ಕ್ರಿಯೇಷನ್ಸ್, ಸರಸ್ವತೀಪುರಂ, ಮೈಸೂರು – ೫೭೦೦೦೯

**ಮುದ್ರಣ** : ಮಣಿಪಾಲ್ ಪ್ರೆಸ್, ಪ್ರೆಸ್‌ಕಾರ್ನರ್, ಮಣಿಪಾಲ – ೫೭೬೧೦೪

**ಮಾರಾಟಗಾರರು** : ನಿರ್ದೇಶಕರು, ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು – ೫೭೦೦೦೬

ಆಕ್ಸ್‌ಫರ್ಡ್ ತತ್ವಶಾಸ್ತ್ರಜ್ಞ ಮತ್ತು ಇತಿಹಾಸಜ್ಞ ಆರ್.ಜಿ.ಕಾಲಿಂಗ್‌ವುಡ್ ಪ್ರಕಾರ ಇತಿಹಾಸ ಒಂದು ಬಗೆಯ ತನಿಖೆ ಅಥವಾ ಸಂಶೋಧನೆ. ಎಲ್ಲ ಇತಿಹಾಸವೂ ಇತಿಹಾಸದ ಕುರಿತ ಚಿಂತನೆಯೇ ಆಗಿದೆ. ಯಾವುದರ ಕುರಿತು ಇತಿಹಾಸಜ್ಞ ಚಿಂತಿಸುತ್ತಿದ್ದಾನೆಯೋ ಆ ಗತಕಾಲದ ಪ್ರತಿಬಿಂಬವೇ ಇತಿಹಾಸ. ಭಾರತದ ಸುಪ್ರಸಿದ್ಧ ಮಾರ್ಕ್ಸ್‌ವಾದಿ ಇತಿಹಾಸಜ್ಞ ಡಿ.ಡಿ.ಕೊಸಾಂಬಿ ಪ್ರಕಾರ ಉತ್ಪಾದನೆಗೆ ಸಂಬಂಧಿಸಿ ನಡೆದ ಪ್ರಗತಿಯ ಬಗೆಗಿನ ಸರಳ ರೇಖಾತ್ಮಕವಾದ ವಿವರಣೆಯೇ ಇತಿಹಾಸ. ಇತಿಹಾಸದ ಭೌತಿಕ ನಿರೂಪಣೆಗೆ ಕೊಸಾಂಬಿಯವರು ಹೆಚ್ಚಿನ ಮಹತ್ತ್ವ ನೀಡಿರುವುದನ್ನು ಕಾಣಬಹುದು.

ಇತಿಹಾಸ ಎಂದರೇನು ಎಂಬ ಪ್ರಶ್ನೆಗೆ ಇ.ಎಚ್.ಕಾರ್ ಉತ್ತರ ಹೀಗಿದೆ: ಅದು ಇತಿಹಾಸಜ್ಞ ಮತ್ತು ಆತ ಸಂಗ್ರಹಿಸಿದ ವಸ್ತುಸಂಗತಿಗಳ ನಡುವಿನ ನಿರಂತರ ಸಂವಾದ. ಭೂತಕಾಲ ಮತ್ತು ವರ್ತಮಾನಕಾಲದ ನಡುವಿನ ಕೊನೆ ಇಲ್ಲದ ಚರ್ಚೆ. ತನ್ನ ಪರಿಸರದ ಜೊತೆ ವ್ಯಕ್ತಿ ಸಂಬಂಧ ಹೇಗೋ, ಹಾಗೆಯೇ ತನ್ನ ತತ್ತ್ವದ ಜೊತೆಗೆ ಇತಿಹಾಸಜ್ಞನ ಸಂಬಂಧ ಕೂಡ. ನೇವಿನ್ಸ್ ಪ್ರಕಾರ ಇತಿಹಾಸ ಎಂಬ ಪದವನ್ನು ನಾವು ಗತಕಾಲದ ಜೊತೆ ಸೇರಿಸಿಯೇ ಮಾತನಾಡುತ್ತೇವೆ. ಇದು ತಪ್ಪು. ಏಕೆಂದರೆ ಇತಿಹಾಸ ಭೂತ ಮತ್ತು ವರ್ತಮಾನ ಕಾಲದ ನಡುವೆ ಸೇತುವೆ ಕಟ್ಟುತ್ತದೆ. ಹಾಗೇ ಭವಿಷ್ಯತ್ತಿನ ಕಡೆಗೊಂದು ಕಣ್ಣು ಹಾಯಿಸುತ್ತದೆ.

20ನೆಯ ಐತಿಹಾಸಿಕ ಸಂಶೋಧನೆಯಲ್ಲಿ ಮಹತ್ತ್ವದ ಬೆಳವಣಿಗೆ ಕಂಡ ಕಾಲಘಟ್ಟ. ಹೊಸ ವಿಚಾರಧಾರೆಗಳು ಹುಟ್ಟಿಕೊಂಡವು. ಈ ಹಿನ್ನೆಲೆಯಲ್ಲಿ ಇತಿಹಾಸದ ಅರ್ಥ, ಸತ್ತ್ವ ಮತ್ತು ನಿಲುವು ಕೂಡ ಬದಲಾದವು.